ಬಾದಾಮಿ ತಹಸೀಲ್ದಾರರವರ ಕಛೇರಿಯ ಕಟ್ಟಡದ ದುರಸ್ಥಿ.

883(1322) ಶ್ರೀ ಚಿಮನ್‌ಕಟ್ಟಿ ಬಾಲಪ್ಪ ಭೀಮಪ್ಪ (ಬಾದಾಮಿ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಾದಾಮಿ ತಹಸೀಲ್ದಾರ್‌ರವರ ಕಛೇರಿಯ ಕಟ್ಟಡವನ್ನು ಯಾವ ವರ್ಷದಲ್ಲಿ ಕಟ್ಟಿಸಲಾಗಿದೆ;

ಆ) ನಾದುರಸ್ತಿಯಾದ ಕಟ್ಟದಲ್ಲಿ ಈ ಕಾರ್ಯಾಲಯ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಕಾಮಗಾರಿಯನ್ನು ಪ್ರಸಕ್ತ ವರ್ಷದ್ಲೇ ಪ್ರಾರಂಭಿಸಲಾಗುವುದೇ?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) 1907

ಆ) ಬಂದಿದೆ.

ಇ) ದುರಸ್ತಿ ಕೆಲಸ ಸದ್ಯಕ್ಕೆ ಪ್ರಾರಂಭಿಸಲಾಗಿದೆ.

ಹುಣಸೂರು ಕ್ಷೇತ್ರದಲ್ಲಿ ಬೆಳೆದ ತಂಬಾಕು ಬೆಳೆಗೆ ಯೋಗ್ಯ ಬೆಲೆ.

884(1370) ಶ್ರೀ ಜಿ.ಟಿ. ದೇವೆಗೌಡ (ಹುಣಸೂರು) :— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಣಸೂರು ಕ್ಷೇತ್ರದಲ್ಲಿ ತಂಬಾಕು ಬೆಳೆದ ರೈತರು ಯೋಗ್ಯ ಬೆಲೆ ಸಿಗದೇ ಸಹಕಾರಿ ಸಂಘಗಳಿಂದ ಪಡೆದ ಸಾಲ ಮರುಪಾವತಿ ಮಾಡಲಾರದ ದುಸ್ಥಿತಿ ಉಂಟಾದ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ರೈತರು ತಂಬಾಕು ಮಾರಾಟವಾಗುವವರೆಗೆ ಸಾಲದ ಮೇಲಿನ ಬಡ್ಡಿಯನ್ನು ಸರ್ಕಾರ ಮನ್ನಾ ಮಾಡುವುದೇ?

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) :—

ಅ) ಹೌದು.

ಆ) ಬಡ್ಡಿ ಮಾನ್ನಾ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.